<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ-</u> ಶ್ರೀ. ಎಸ್.ಕೆ.ಜೆ. ವಕೀಲರಿಂದ ಆರೋಪಿಯ ಪರವಾಗಿ

12. ಆರೋಪಿಯು ಮನೆಯ ವಸ್ತುಗಳನ್ನು ಖರೀದಿಸಲು ಸಾಲವನ್ನು ಪಡೆದಿರುತ್ತಾರೆ. ಸಾಲದ ಅವಧಿ ಮೂರು ವರ್ಷ. ಅದಕ್ಕೆ ಶೇ. 18 ರಷ್ಟು ಬಡ್ಡಿ. ಶೇ.16 ಕ್ಕಿಂತ ಹೆಚ್ಚು ಬಡ್ಡಿಯನ್ನು ವಿಧಿಸುವಂತಿಲ್ಲ ಎಂದರೆ ಸರಿಯಲ್ಲ.

13. ಆರೋಪಿಯ ಮಗ ಮಹಮ್ಮದ ಹನೀಫ್ ರವರು ನಮ್ಮ ಬ್ಯಾಂಕನಲ್ಲಿ ಸಾಲ ಪಡೆದಿದ್ದರು, ಅದನ್ನು ಸಂಪೂರ್ಣ ಮರು ಪಾವತಿ ಮಾಡಿರುತ್ತಾರೆ. ಸದರಿ ಸಾಲಕ್ಕೆ ಅರೋಪಿಯು ಜಾಮೀನುದಾರರು ಎಂದರೆ ನನಗೆ ಗೊತ್ತಿಲ್ಲ.

14. ನಿಪಿ 1 ನ್ನು ಆರೋಪಿಯ ಸಮಕ್ಷಮದಲ್ಲಿ ಬ್ಯಾಂಕಿನವರೇ ಭರ್ತಿ ಮಾಡಿರುತ್ತಾರೆ. ಮೂರು ವರ್ಷದ ಅವಧಿ ಮುಗಿದ ನಂತರ ನಾವು ಆರೋಪಿಯಿಂದ ಚೆಕ್ಕನ್ನು ಪಡೆದಿರುತ್ತೇವೆ. ಆರೋಪಿಯು ನಮ್ಮ ಬ್ಯಾಂಕಿಗೆ ಬಂದು ಚೆಕ್ಕನ್ನು ನೀಡಿರುತ್ತಾರೆ. ಆರೋಪಿಯು ಪಡೆದ ಸಾಲಕ್ಕೆ ನಿಪಿ 1 ರ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮಗ ಪಡೆದ ಸಾಲಕ್ಕೆ ನಿಪಿ 1 ರ ಚೆಕ್ಕನ್ನು ಭದ್ರತೆಗಾಗಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

15. ಆರೋಪಿ ಪಡೆದ ಸಾಲವು ಜಾಮೀನು ಸಾಲವಾದ ಕಾರಣ ಭದ್ರತೆಗಾಗಿ ಎರಡು ಜಾಮೀನುದಾರರನ್ನು ಪಡೆದಿರುತ್ತೇವೆ. ನಮ್ಮ ಬ್ಯಾಂಕಿನಲ್ಲಿ ಸಾಲ ಕೊಡುವಾಗ ಹಿರಿಯ ನಾಗರೀಕರಾಗಿದ್ದರೇ ಅವರ ಆಧಾಯದ ಮೇಲೆ ಸಾಲ ನೀಡುತ್ತೇವೆ. ಆರೋಪಿಯು ರೀಕ್ಷಾ ಚಾಲಕರಾಗಿದ್ದ ಕಾರಣ ಅವರಿಂದ ಚಾಲನಾ ಪರವಾನಿಗೆಯನ್ನು ಪಡೆದುಕೊಂಡಿರುತ್ತೇವೆ.

16. ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ